ಬೆಂಗಳೂರು ಜಲಮಂಡಳಿಯಿಂ ಕಾವೇರಿ 3ನೇ ಹಂತದ ಯೋಜನೆಗೆ ಹುಡ್ಕೋ ಸಂಸ್ಥೆಯಿಂದ ಧನ ಸಹಾಯ

೫೮. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಜಲಮಂಡಳಿಯು ಕಾವೇರಿ ೩ನೇ ಹಂತದ ಯೋಜನೆಗೆ ಧನ ಸಹಾಯಕ್ಕಾಗಿ ಹುಡ್ಕೋ ಸಂಸ್ಥೆಯನ್ನು ಕೇಳಿದೆಯೇ

ಆ) ಹಾಗೆ ಕೇಳಿದ್ದಲ್ಲಿ ಎಷ್ಟು ಹಣಕ್ಕೆ ಬೇಡಿಕೆ ಸಲ್ಲಿಸಿದೆ ?

ಇ) ಹುಡ್ಕೋಗೆ ತರಬೇಕಾದ ಬಡ್ಡಿ ದರ

ಈ) ಹುಡ್ಕೋದಿಂದ ಧನ ಸಹಾಯವನ್ನು ಯಾವಾಗ ನಿರೀಕ್ಷಿಸಲಾಗಿದೆ

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು)—

ಅ) ಹೌದು

ಆ) ರೂ. ೩೦ ಕೋಟಿಗಳು

ಇ) ಪ್ರತಿ ಶತ ೧೫.೨೫%ರಿಸಲು ಮತ್ತು ಬಡ್ಡಿಗಳನ್ನು ಸಕಾಲಕ್ಕೆ ಮರುಪಾವತಿ ಮಾಡಿದಲ್ಲಿ ಪ್ರತಿ ಶತ ೦.೨೫%ರಷ್ಟು ಸೋಡಿ ನೀಡಲಾಗುವುದು.

ಈ) ಅತಿ ಶೀಘ್ರದಲ್ಲಿ

ಮಹಿಳೆಯರ ಮೇಲಿನ ಕಿರುಕುಳ ಮತ್ತು ದೌರ್ಜನ್ಯದ ಪ್ರಕರಣಗಳು

೮೦. ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಮಾಯಕೊಂಡ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮಹಿಳೆಯರ ಮೇಲಿನ ಕಿರುಕುಳ ಮತ್ತು ದೌರ್ಜನ್ಯ ಪ್ರಕರಣಗಳ ಬಗ್ಗೆ ಬೆಂಗಳೂರು ನಗರದ ಪೋಲೀಸ್ ಕಮೀಷನರ್‌ರವರ ಕಛೇರಿಯಲ್ಲಿ ಒಂದು ಪ್ರತ್ಯೇಕ ವಿಭಾಗವನ್ನು ಪ್ರಾರಂಭಿಸಲಾಗಿದೆಯೆ ?

ಆ) ಹಾಗಿದ್ದರೆ ಈ ವಿಭಾಗದ ಬಗ್ಗೆ ಸಾರ್ವಜನಿಕರ ಮತ್ತು ಮಹಿಳಾ ಕಲ್ಯಾಣ ಸಂಸ್ಥೆಗಳ ಪ್ರತಿಕ್ರಿಯೆ ಏನು ?

ಇ) ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಆರು ವಿಭಾಗಗಳ ಡಿ.ಐ.ಜಿ.ರವರ ಕಛೇರಿಗಳಲ್ಲಿ ಈ ವಿಭಾಗವನ್ನು ಒಬ್ಬ ಮಹಿಳಾ ಸಬ್ ಇನ್ಸ್‌ಪೆಕ್ಟರ್‌ರೊಳ ಗೊಂಡಂತೆ ಸರ್ಕಾರವು ಸ್ಥಾಪಿಸುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—

ಅ) ಹೌದು

ಆ) ಸಾರ್ವಜನಿಕರಿಂದ ಮತ್ತು ಮಹಿಳಾ ಕಲ್ಯಾಣ ಸಂಸ್ಥೆಗಳಿಂದ ಒಳ್ಳೆಯ ಪ್ರತಿಕ್ರಿಯೆ ಇದೆ.

ಇ) ಇಂತಹ ಘಟಕಗಳನ್ನು ವಲಯ ವಂಟ್ಟದಲ್ಲಿ ತೆರೆಯುವ ಪ್ರಸ್ತಾವನೆ ಇರುವುದಿಲ್ಲ.

ಹಾಸನ ನಗರಕ್ಕೆ ನೀರು ಸರಬರಾಜುವಿನ ಬಗ್ಗೆ

೧೬೭. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಬಂದರು, ವಿಮಾನಯಾನ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಪಟ್ಟಣದಲ್ಲಿ ಕೊಡಿಯುವ ನೀರಿಗೆ ತುಂಬಾ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ಟಿ ಎನ್. ನರಸಿಂಹಮೂರ್ತಿ. (ಬಂದರು, ವಿೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು). —

ಆ) ಬಂದಿದೆ.

ಆ) ಹಾಸನ ನಗರಕ್ಕೆ ಒಂದು ಸಮಗ್ರ ನೀರು ಸರಬರಾಜು ಯೋಜನೆಯನ್ನು ರೂ. ೩೫೦ ೦೦ ಲಕ್ಷ ಅಂದಾಜಿನಲ್ಲಿ ತಯಾರಿಸಲಾಗಿದೆ. ಹುಡ್ಕೋ ವಸತಿಯ ಸಹಾಯಧನದಿಂದ ಕೈಗೊಳ್ಳಲಾಗುವ ಇತರ ಯೋಜನೆಗಳೊಂದಿಗೆ ಇದನ್ನೂ ಸಹ ಸೇರಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ ಪ್ರಶ್ನೋತ್ತರ ಸಮಯವನ್ನು ಹೆಚ್ಚಿಸುವ ಬಗ್ಗೆ

ಅಧ್ಯಕ್ಷರು.—ಲಿಖಿತ ಉತ್ತರಗಳನ್ನು ಮಂಡಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶ್ರೀ ಕೆ.ಎಚ್. ಹನುಮೇಗೌಡ.—ನಮ್ಮ ಪ್ರಶ್ನೆ ಕೊನೆಯಲ್ಲಿ ಬರುತ್ತದೆ. ಈ ರಾಜ್ಯಕ್ಕೆ ಸಂಬಂಧಪಟ್ಟಹಾಗೆ, ನಮ್ಮ ಕ್ಷೇತ್ರದ ಜನತೆಗೆ ಸಂಬಂಧಪಟ್ಟಹಾಗೆ ನಮ್ಮ ಕ್ಷೇತ್ರದ ಜನತೆಗೆ ಸಂಬಂಧಪಟ್ಟ ಹಾಗೆ ನಾವು ಪ್ರಶ್ನೆಗಳನ್ನು ಕಳುಹಿಸಿರುತ್ತೇವೆ. ಇದಕ್ಕೆ ಉತ್ತರ ಕೊಡದೇಹೋದರೆ ಹೇಗೆ? ಕೊಶ್ಚನ್ ಅವರ್ ಜಾಸ್ತಿ ಮಾಡಿ. ಇಲ್ಲದೇ ಹೋದರೆ ಒಂದೊದೂ ಪ್ರಶ್ನೆಗೆ ಇಷ್ಟೆ ಸಮಯ ಎಂದು ನಿಗದಿ ಮಾಡಿ.

ಅಧ್ಯಕ್ಷರು.—ನಿನ್ನೆ ನಾಯಕ್ ಅವರು ಸಭೆಯ ಗಮನಕ್ಕೆ ಈ ವಿಚಾರವನ್ನು ತಂದಾಗ ನನ್ನ ನಿಲುವು ಏನು ಎಂಬುದನ್ನು ತಿಳಿಸಿದ್ದೇನೆ. ಪ್ರಶ್ನೋತ್ತರ ವೇಳೆ ೬೦ ನಿಮಿಷ ಎಂದು ರೂಲ್ಸ್ ಆಫ್ ಪ್ರೊಸೀಜರ್ ಅಂಡ್ ಕಂಡಕ್ಟ್ ಆಫ್ ಬಿಸಿನೆಸ್‌ನಲ್ಲಿ ನಮೂದಿತವಾಗಿದೆ. ಈ ಸಭೆಯು ಒಟ್ಟಾರೆ ಅಭಿಪ್ರಾಯ ಪ್ರಶ್ನೋತ್ತರ ಕಾಲವನ್ನು ೯೦ ನಿಮಿಷ ಮಾಡಬೇಕೆಂಬುದಾದರೆ ಇಲ್ಲಿ ಸಭಾ ನಾಯಕರಿದ್ದಾರೆ, ವಿರೋಧ ಪಕ್ಷದ ನಾಯಕರಿದ್ದಾರೆ ಮತ್ತಿತರ ರಾಜಕೀಯ ಪಕ್ಷಗಳ ನಾಯಕರಿದ್ದಾರೆ ಇವರೆಲ್ಲರೂ ಸೇರಿ ತೀರ್ಮಾನ ತೆಗೆದುಕೊಳ್ಳಬಹುದು. ಇದರ ಬಗ್ಗೆ ಜಿಜ್ಞಾಸೆ ಬೆಳೆಸಬೇಕು ಎಂದು ನನಗೆ ಇಷ್ಟ ಇಲ್ಲ. ಆದ್ದರಿಂದ ನೀವು ಸಭೆಯವರು ಹೇಗೆ ಮಾರ್ಗದರ್ಶನ ಮಾಡುತ್ತೀರೋ ಅದರ ಪ್ರಕಾರ ನಾನು ನಡೆಯಬೇಕೆಂದು ತೀರ್ಮಾನ ಮಾಡಿದ್ದೇನೆ. ನಾನು ಮೊದಲು ವಿಧಾನಸಭಾ ಸದಸ್ಯನಾಗಿದ್ದೆ, ವಿಧಾನಪರಿಷತ್ತಿನ ಸದಸ್ಯನಾಗಿದ್ದೆ, ಲೋಕಸಭಾ ಸದಸ್ಯನಾಗಿದ್ದೆ. ಎಲ್ಲಿಯೂ ಕೂಡ ನಮೂದಿತ ವಾಗಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದಕ್ಕೆ ಸಾಧ್ಯವಾಗಿಲ್ಲ. ಕೆಲವು ಸಮಯ ಮುಖ್ಯವಾದ ಪ್ರಶ್ನೆ ಬರುತ್ತದೆ. ಗಡಿ ವಿವಾದದ ಪ್ರಶ್ನೆ. ದರೋಡೆ ಪ್ರಶ್ನೆ ಮಂತಾದವು ಗಳು ಪ್ರಾಮುಖ್ಯವಾದ ಪ್ರಶ್ನೆಗಳು. ಸ್ವಾಭಾವಿಕವಾಗಿ ಆ ಪ್ರಶ್ನೆಗಳಿಗೆ ಹೆಚ್ಚು ಸಮಯ ಕೊಡಬೇಕಾಗುತ್ತದೆ. ಸ್ಥಳೀಯ ಸಮಸ್ಯೆಗಳ ವಿಚಾರ ಬಂದಾಗ ಕುಂದುಕೊರತೆಗಳನ್ನು ಹೇಳಿಕೊಳ್ಳು ವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಈ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವಾಗ ನಾನು ಹೇಗೆ ಸಭೆ ನಡೆಸಬೇಕು ಎಂದು ಹನುಮೇಗೌಡರು ಹೇಳುತ್ತಾರೋ ಅದರಂತೆ ನಡೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಇದು ಈ ಸದನದಲ್ಲಿ ಮಾತ್ರವಲ್ಲ ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ. ಕೇರಳ ವಿಧಾನಸಭೆಯಲ್ಲಿ ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಕೂಡ ಆಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ.—ನಿನ್ನೆ ಎರಡು ಮೂರು ಪ್ರಶ್ನೆಗಳು ಲ್ಯಾಪ್ಸ್ ಆಯಿತು. ಇವತ್ತು ೨೦ ಪ್ರಶ್ನೆಯಲ್ಲಿ ೧೦ ಪ್ರಶ್ನೆಗಳು ಲ್ಯಾಪ್ಸ್ ಆಯಿತು ನಮ್ಮ ಕ್ಷೇತ್ರದ ಮತದಾರರು ಕಾಯುತ್ತಿರುತ್ತಾರೆ. ನಮ್ಮ ಸದಸ್ಯರು ಪ್ರಶ್ನೆ ಕೇಳಿದಾ ರೆಯೇ ಅಥವಾ ನಿದ್ದೆ ಹೋಗುತ್ತಿದ್ದಾರೆಯೇ ಅಥವಾ ಇನ್ಸ್‌ಪೆಕ್ಟ್ ಮಾಡುತ್ತಿದ್ದಾರೆಯೇ. ಅಥವಾ ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಹರಟೆ ಹೊಡೆಯು